# ಕುವೆಂಪುರವರ ಹಾಸ್ಯಪ್ರಜ್ಞೆ

ಡಾ. ಪ್ರಭುಶಂಕರ

**ಕು**ವೆಂಪು ಅವರಿಗೆ ಅಸಾಧಾರಣವಾದ ಹಾಸ್ಯಪ್ರಜ್ಞೆ ಇತ್ತು. ತರಗತಿಗಳಲ್ಲದೆ ದಿನನಿತ್ಯದ ಮಾತುಕತೆಗಳಲ್ಲೂ ನಮಗೆ ನಕ್ಕು ನಕ್ಕು ಸಾಕಾಗುತ್ತಿತ್ತು. ಅಂಥ ಸಂದರ್ಭಗಳನ್ನೆಲ್ಲ ಆಗಾಗಲೇ ಗುರುತು ಮಾಡದೆ ಎಂಥ ತಪ್ಪು ಮಾಡಿದೆ ಎಂದು ಈಗ ಪಶ್ಚಾತ್ತಾಪ ಪಡುತ್ತಿದ್ದೇನೆ. ಇರಲಿ.

ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾಗುವ ಪ್ರತಿಯೊಂದು ಪುಸ್ತಕವೂ ಪ್ರಕಟಣ ಸಮಿತಿಯ ಒಪ್ಪಿಗೆ ಪಡೆದೇತೀರಬೇಕಾಗಿತ್ತು. ಅದಕ್ಕೆ ಕುವೆಂಪು ಅವರೇ ಅಧ್ಯಕ್ಷರು. ಡಾ.ಹಾ.ಮಾ. ನಾಯಕರೂ ಒಬ್ಬ ಸದಸ್ಯರು. ಒಮ್ಮೆ ಅವರ ತಮ್ಮ ಡಾ. ಈಶ್ವರ ಅವರ ಒಂದು ಹಸ್ತಪ್ರತಿ ಸಮಿತಿಯ ಮುಂದೆ ಪ್ರಸ್ತಾಪಕ್ಕೆ ಬಂತು. ಅದನ್ನು ನಮ್ಮ ನಿಯಮದಂತೆ ತಜ್ಞರೊಬ್ಬರು ಪರಿಶೀಲಿಸಿ ಪ್ರಕಟಿಸಬಹುದು ಎಂದು ಶಿಫಾರ್ಸು ಮಾಡಿದ್ದರು. ಅವರ ಶಿಫಾರ್ಸನ್ನು ಸಭೆಯಲ್ಲಿ ಓದಲಾಯಿತು. ಅನಂತರ ಅಧ್ಯಕ್ಷರು "ಸರಿ, ಇನ್ನೇನು ಅದನ್ನು ಪ್ರಕಟಿಸಬಹುದು" ಎಂದರು. ಡಾ. ಹಾ.ಮಾ. ನಾಯಕರು "ದಯವಿಟ್ಟು ಬೇಡಿ" ಎಂದರು. ಈ ಅನಿರೀಕ್ಷಿತವಾದ ಆಕ್ಷೇಪಣೆಯಿಂದ ಸಮಿತಿಯ ಸದಸ್ಯರು ಚಕಿತರಾದರು. ಶ್ರೀಕುವೆಂಪು "ಏಕೆ, ನಾಯಕರೆ, ಏಕೆ ಬೇಡ?" ಎಂದು ಕೇಳಿದರು. ನಾಯಕರು "ಅದರ ಲೇಖಕರಾದ ಡಾ. ಈಶ್ವರ್ ನನ್ನ ತಮ್ಮ. ನಾನು ಸದಸ್ಯನಾಗಿದ್ದು ಅದನ್ನು ಪ್ರಕಟಿಸಲು ಒಪ್ಪುವುದು ನೈತಿಕ ದೃಷ್ಟಿಯಿಂದ ಸರಿಯಲ್ಲ" ಎಂದರು. ಕುವೆಂಪು ಮಂದಸ್ಮಿತರಾಗಿ "ನಾಯಕರೇ ನೀವು ಕೊಡುತ್ತಿರುವ ಕಾರಣ logical ಅಲ್ಲ, biological" ಎಂದರು! ಇಡೀ ಸಮಿತಿ ಘೊಳ್ಳೆಂದು ನಕ್ಕಿತು. (ತಾರ್ಕಿಕ ಅಲ್ಲ, ಜೀವ ಸಂಬಂಧಿ ಎಂದು. ಪದಗಳ ಮೇಲೆ ಆಡಿದ ಆಟ, ಶ್ಲೇಷೆ.) ನಾಯಕರ ಆಕ್ಷೇಪಣೆಯನ್ನು ತಳ್ಳಿಹಾಕಿ ಕೃತಿಯನ್ನು ಪ್ರಕಟಿಸಲಾಯಿತು.

ಪ್ರಕಟಣ ಸಮಿತಿಯ ಮತ್ತೊಂದು ಘಟನೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರೊಬ್ಬರು ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನೂ ಪುಸ್ತಕಗಳನ್ನೂ ಆ ವೇಳೆಗೆ ಪ್ರಕಟಿಸಿದ್ದರು. ಅವರ ಒಂದು ಹಸ್ತಪ್ರತಿ ಪರಿಶೀಲನೆಗೆ ಬಂತು. ವಿಷಯ ನಮ್ಮ ಹಿಂದಿನವರಿಗೆ ವಿಕಾಸವಾದ ತಿಳಿದಿತ್ತೆಂದೂ, ದಶಾವತಾರಗಳ ಕಲ್ಪನೆಯಲ್ಲಿ ಅದು ಅವರಿಗೆ ತಿಳಿದಿದ್ದುದು ಸಿದ್ಧಾಂತವಾಗುತ್ತದೆಂದೂ ಪ್ರಾಧ್ಯಾಪಕರು ಪ್ರತಿಪಾದಿಸಿದ್ದರು. ನಾನು "ನೋಡಿ, ದಶಾವತಾರಗಳಲ್ಲಿ ವಿಕಾಸವಾದವನ್ನು ಸಮರ್ಥಿಸುವುದಕ್ಕೆ ಬೇಕಾದ ಎಲ್ಲ ವೈಜ್ಞಾನಿಕ ಪುರಾವೆಗಳೂ ಇಲ್ಲ. ಕೆಲವು missing links—ಕೊಂಡಿಗಳೇ ಇಲ್ಲ—" ಎಂದು ಮುಂದುವರಿದು "ವಿಶ್ವವಿದ್ಯಾನಿಲಯದಂತಹ ಸಂಸ್ಥೆಯಿಂದ ಇದು ಪ್ರಕಟವಾದರೆ ಕೆಟ್ಟ ಹೆಸರು ಬರುತ್ತದೆ" ಎಂದೂ ಹೇಳಿದೆ. ಸಮಿತಿಯು ನನ್ನ ವಾದವನ್ನು ಒಪ್ಪಿ ಅದನ್ನು ಪ್ರಕಟಿಸುವುದು ಬೇಡ ಎಂದಿತು. ಪ್ರಾಧ್ಯಾಪಕರ ಪತ್ರದಲ್ಲಿದ್ದ ಇನ್ನೊಂದು ಅಂಶವನ್ನು ಸಮಿತಿಯ ಗಮನಕ್ಕೆ ತರುವುದು ಅವಶ್ಯಕ ಎಂದು ಭಾವಿಸಿ ನಾನು ಆ ವಾಕ್ಯವನ್ನು ಓದಿದೆ : "ಈ ನನ್ನ ಪುಸ್ತಕವನ್ನು ಪ್ರಸಾರಾಂಗವು ಪ್ರಕಟಿಸದಿದ್ದರೆ ನಾನು ಇನ್ನು ಮುಂದೆ ವೈಜ್ಞಾನಿಕ ವಿಷಯಗಳನ್ನು ಕುರಿತು ಬರೆಯುವುದನ್ನು ನಿಲ್ಲಿಸಿಬಿಡುತ್ತೇನೆ." ತಕ್ಷಣ ಕುವೆಂಪು ಅವರು "ನಾವು ಈ ಪುಸ್ತಕವನ್ನು ಪ್ರಕಟಿಸದೇ ಇರುವುದಕ್ಕೆ ಇದು ಪ್ರಬಲವಾದ ಕಾರಣವೇ ಆಯಿತು" ಎಂದರು. ಮತ್ತೆ ನಗೆಗಡಲು.

ಶ್ರೀ ಕುವೆಂಪು ಒಂದು ಪ್ರಿಫೆಕ್ಟ್ ಕಾರ್ ಕೊಂಡಿದ್ದರು. ತಾವೇ ಅದನ್ನು ಡ್ರೈವ್ ಮಾಡಿಕೊಂಡು ಕಾಲೇಜಿಗೆ ಬರುತ್ತಿದ್ದರು. ಒಂದು ದಿನ ಬೆಳಗ್ಗೆ ಒಂಬತ್ತರಿಂದ ಹನ್ನೆರಡು ಹನ್ನೆರಡೂವರೆವರಗೆ ಪಾಠ ನಡೆದಿದೆ. ಅಂದು ಅವರು ಕನ್ನಡನಾಡಿನಲ್ಲಿ ಮಕ್ಕಳಿಂದ ಮುದುಕರವರೆಗೆ ಎಲ್ಲರಿಗೂ ಪರಿಚಿತವಾಗಿರುವ 'ಗೋವಿನಕಥೆ' ಹಾಡಿನ ಕಾವ್ಯಸೌಂದರ್ಯ, ರಸ, ಧ್ವನಿ ಇತ್ಯಾದಿಗಳನ್ನು ಕುರಿತು ಮೂರು ಗಂಟೆಗಳ ಕಾಲ ಅಮೋಘವಾಗಿ ಪ್ರವಚನ ನಡೆಸಿದ್ದರು. ನಾನು ಅವರ ಹಿಂದೆಯೇ ಅವರ ಕಾರಿನವರೆಗೆ ಬಂದೆ. ನೋಡುತ್ತೇನೆ, ಕಾರಿನಲ್ಲಿ ಅವರ ಇಬ್ಬರು ಮಕ್ಕಳು—ತೇಜಸ್ವಿ ಮತ್ತು ಚೈತ್ರ! ಇಬ್ಬರೂ ಚಿಕ್ಕವರು. ಗುರುಗಳು ಅವರನ್ನು ಕೂಡಿಹಾಕಿ ಕಾರಿಗೆ ಬೀಗಹಾಕಿ ಬಂದಿದ್ದಾರೆ. ಗಾಳಿ ಬರಲಿ ಎಂದು ಕಿಟಕಿಯ ಗಾಜುಗಳನ್ನು ಅರ್ಧಮಾತ್ರ ತೆರೆದಿದ್ದಾರೆ! " ಇವರನ್ನೇಕೆ ಕಾರಿನಲ್ಲಿ ಕೂಡಿಹಾಕಿದ್ದೀರಿ? ಇಂಥ ತುಂಟರು ಇಷ್ಟು ಹೊತ್ತು ಹೇಗೆ ಕಾಲ ಕಳೆದರು? ಅದೂ ಹೋಗಲಿ— ಇವರನ್ನು ಕರೆದು ತಂದು ನಮ್ಮ ಕ್ಲಾಸಿನಲ್ಲಿ ಏಕೆ ಕೂರಿಸಲಿಲ್ಲ?" ಎಂದು ಒಂದೇ ಸಮನೆ ಪ್ರಶ್ನೆಗಳನ್ನು ಕೇಳಿದೆ. ಅವರು ನಗುತ್ತಾ ಹೇಳಿದರು: "ಇವರಿಗೆ ಬೇಸಿಗೆ ರಜೆ. ಮನೆಯಲ್ಲಿ ತುಂಟಾಟ ಮಾಡುತ್ತಾರೆ ಎಂದು ಕರೆತಂದೆ. ಅವರನ್ನು ಕ್ಲಾಸಿಗೆ ಕರೆದುತಂದಿದ್ದರೆ ನನಗಾಗಲಿ, ನಿಮಗೂ ನಿಮ್ಮ ಸಹಪಾಠಿಗಳಿಗಾಗಲಿ ಸ್ವಲ್ಪವೂ ಗೌರವ ಬರುತ್ತಿರಲಿಲ್ಲ !!" ನನಗೆ ಅರ್ಥವಾಗಲಿಲ್ಲ. ಏಕೆ ಎಂದು ಕೇಳಿದೆ. ಅವರು: "ನಾನು ಇವತ್ತು ಹೇಳಿದ ಪಾಠ ಯಾವುದನ್ನು ಕುರಿತದ್ದು?" ಎಂದು ಕೇಳಿದರು. ನಾನು 'ಗೋವಿನಕಥೆ' ಎಂದೆ. ಅವರು 'ಅದಕ್ಕೇ' ಎಂದರು. ನನ್ನ ಮುಖ ತಿಳಿವನ್ನು ತೋರುತ್ತಿರಲಿಲ್ಲವಾಗಿ ಅವರು ವಿವರಿಸಿ ಹೇಳಿದರು: "ನಮ್ಮ ಹುಡುಗರು—ನಮ್ಮ ತಂದೆ ಎಂ.ಎ. ಕ್ಲಾಸಿಗೆ ಪಾಠ ಹೇಳುವುದು, ನಮಗೆ ಶಾಲೆಯಲ್ಲಿ ಹೇಳಿಕೊಡುವ 'ಗೋವಿನಕಥೆ' ಯನ್ನೇ ಎಂದುಕೊಳ್ಳುತ್ತಾರೆ. ಅಲ್ಲದೆ, ನೀವೂ, ಇಷ್ಟು ಬೆಳೆದವರಾಗಿಯೂ 'ಗೋವಿನ ಕಥೆ' ಯನ್ನೇ ಪಾಠ ಹೇಳಿಸಿಕೊಳ್ಳುತ್ತೀರಿ ಎಂದುಕೊಳ್ಳುವುದಿಲ್ಲವೆ?"

